# ಸೇಂಟ್ ಜರ್ಮೈನ್ ಶಾಲೆಗೆ ಜಯ

**ಪ್ರಜಾವಾಣಿ ವಾರ್ತೆ**

**ಬೆಂಗಳೂರು:** ಸೇಂಟ್ ಜರ್ಮೈನ್ ಪ್ರೌಢಶಾಲೆ ತಂಡದವರು ಇಲ್ಲಿ ನಡೆಯುತ್ತಿರುವ ಸೇಂಟ್ ಜೋಸೆಫ್ಸ್ ಬಾಲಕರ ಪ್ರೌಢಶಾಲೆ ಆಶ್ರಯದ ಸೆಂಟೇನರಿ ಕಪ್ ಸೀನಿಯರ್ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಅರ್ಹ ಗೆಲುವು ಪಡೆದರು.

ಎಸ್‌ಜೆಬಿಎಚ್‌ಎಸ್ ಶಾಲೆ ಆಟದ ಮೈದಾನದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಸೇಂಟ್ ಜರ್ಮೈನ್ ಪ್ರೌಢಶಾಲೆ ತಂಡದವರು 6–2 ಗೋಲುಗಳಿಂದ ಡ್ರೀಮ್ ಎ ಡ್ರೀಮ್ ತಂಡವನ್ನು ಸೋಲಿಸಿದರು.

ಬಾಲ್ಡ್‌ವಿನ್ ಬಾಲಕರ ಪ್ರೌಢಶಾಲೆ ಮತ್ತು ಸೇಂಟ್ ಜಾನ್ಸ್ ಪ್ರೌಢಶಾಲೆ ತಂಡಗಳ ನಡುವಣ ಫಾದರ್ ಎರಿಕ್ ವಾಜ್ ಸ್ಮಾರಕ ಜೂನಿಯರ್ ಹಾಕಿ ಟೂರ್ನಿಯ ಪಂದ್ಯ ಗೋಲು ರಹಿತ ಡ್ರಾ ಆಯಿತು.